ಪ್ರಾಮಾಣಿಕವಾಗಿ ಹೇಳುತ್ತೇನೆ. 'ಒಬ್ಬಳೇ ಒಬ್ಬಳು ಯುವತಿಯನ್ನೂ ನಾನು ಪ್ರೀತಿಸಿಲ್ಲ!'

ಸದಾಚಾರ ಎಂಬುದು ಒಂದಿದ್ದರೆ ಅದರ ಮೊಂಡು ಮುಖಕ್ಕೆ ಮುಷ್ಟಿ ಹಿಡಿದು ನಾಲ್ಕು ಗುದ್ದು ಗುದ್ದಬೇಕೆಂದು ನಾನು ಹೇಳುತ್ತಿದ್ದೆ. ಗೆಳೆಯರೇ, ಸಮಾಜದಲ್ಲಿ ಸದಾಚಾರ ಪರವಾದ ನೀತಿಗಳಿಗೆ ಶರಣಾಗುವುದಿಲ್ಲ ಎಂಬ ಹಟ ನನಗಿತ್ತು. ನನ್ನ ಅನುಭವಗಳನ್ನು ಕುರಿತು ನಾನು ನಿಮಗೆ ವಿವರಿಸಿದ್ದೇನೆಂದು ನನ್ನ ನೆನಪು.

ಹೇಗೆ ನಾನು ದುರ್ಮಾರ್ಗಿಯಾದುದು? ನಾನು ಯೋಚಿಸುತ್ತಿದ್ದೇನೆ. ಅದರಲ್ಲಿ ಯಾರು ಅಪರಾಧಿ? ಅದೆಲ್ಲವನ್ನು ನಾನು ಮೊದಲು ಹೇಳಿದ್ದೇನೆಂದು ಕಾಣಿಸುತ್ತದೆ... ಹನ್ನೆರಡೋ ಹದಿಮೂರೋ ವಯಸ್ಸು ಪ್ರಾಯವಿರುವ ಕಾಲದಲ್ಲಿ ಯೌವ್ವನಕ್ಕೆ ಕಾಲಿಡುವ ಮುನ್ನ, ಲೈಂಗಿಕ ಭಾವನೆಗಳ ಮರ್ಮರಗಳನ್ನು ನನ್ನಲ್ಲಿ ಎಬ್ಬಿಸಿದ್ದು ಅಂದು ನಮ್ಮ ಕುಟುಂಬದಲ್ಲಿದ್ದ ವಿಧವೆಯಾದ ಕೆಲಸದಾಕೆ... ಇದೆಲ್ಲವನ್ನು ತಮ್ಮಲ್ಲಿ ಒಂದು ಸಂದರ್ಭದಲ್ಲಿ ಹೇಳಿದ್ದಿರಬೇಕು.

ಹೈಸ್ಕೂಲು ವಿದ್ಯಾರ್ಥಿಯಾಗಿದ್ದ ಕಾಲದಲ್ಲಿಯೇ ಪ್ರಣಯಭ್ರಾಂತನಾಗಿದ್ದೆ. ನಾನು ಮಾಂಸಲವಾದ ಸ್ತ್ರೀ ಸೌಂದರ್ಯವನ್ನು ಕುರುಡಾಗಿ ಆರಾಧಿಸುವ ಪ್ರಕೃತಿಯವನಾಗಿದ್ದೆ. ನನ್ನ ಅತ್ಯಂತ ದೊಡ್ಡ ದೌರ್ಬಲ್ಯಗಳಲ್ಲಿ ಒಂದು ಸ್ತ್ರೀ! ಕೋಮಲತೆ ತುಳುಕುವ ಪುಟ್ಟ ಹೂವನ್ನು ಮುದ್ದಾಡಲು ನಮಗೆ ಆಸೆಯಾಗುವುದಿದೆ. ಆದರೂ ಹೆಣ್ಣು ನನ್ನನ್ನು ಆಕರ್ಷಿಸಿದ್ದು ಆ ರೀತಿಯಲ್ಲಾಗಿರಲಿಲ್ಲ. ನೊರೆಯಾವರಿಸಿದ ಮಧುರವಾದ ಮದಿರೆ ತುಂಬಿದ ಪಾನಪಾತ್ರೆಯ ಬಗೆಗಿನ ಆಸೆಯೇ ನನ್ನ ಅನುಭವಕ್ಕೆ ಬಂದುದು...

ಉನ್ನತವಾದ ಆರ್ಥಿಕ ಸ್ಥಿತಿ ಹಾಗೂ ನೋಡಿದರೆ ಮೆಚ್ಚಬಹುದಾದ ಮುಖವೂ ಇದ್ದುದರಿಂದ ಸೋಲುಗಳು ನನಗೆ ಅಷ್ಟಾಗಿ ಅನುಭವಕ್ಕೆ ಬರಲಿಲ್ಲ.

...ಹಾಗೆ ನಾನು ಅಧಃಪತನ ಹೊಂದಿದ್ದು. ಆ ಮಧುರ ಮದ್ಯವನ್ನು ಸೇದಿ ಸೇದಿ ಕುಡಿದೆ... ಭಾವುಕನಾದ ಆ ಲಹರಿಯಲ್ಲಿ ಪ್ರಪಂಚವನ್ನು ಸುತ್ತುಮುತ್ತಲ ಪರಿಸರವನ್ನೂ ಮರೆತೆ.

ಪ್ರಾಮಾಣಿಕವಾಗಿ ಪ್ರೀತಿಸುವುದು!... ಪ್ರಾಮಾಣಿಕತೆಗೆ ನನ್ನ ಬದುಕಿನಲ್ಲಿ ದೊಡ್ಡ ಸ್ಥಾನವೇನೂ ಇರಲಿಲ್ಲ. ಕಳೆದ ಕಾಲದ ಪುಟಗಳಲ್ಲೊಂದರಲ್ಲಿಯೂ ಅದು ಬರೆಯಲಿಲ್ಲ...

ನಿಮ್ಮಿಂದೆಲ್ಲ ಮರೆಮಾಚಿದ ಘಟನೆಯೊಂದು ನೆನಪಿಗೆ ಬರುತ್ತಿದೆ.

ಒಮ್ಮೆಯೂ ನನಗದನ್ನು ಮರೆಯಲಾಗುವುದಿಲ್ಲ! ಅದು ನಡೆದುದು ಮೂರು ವರ್ಷಗಳ ಹಿಂದೆ. ಕಾಲೇಜು ಮುಗಿಸಿ ರಜೆಯಲ್ಲಿ ಊರಿಗೆ ಬಂದ ಕಾಲ. ಹಳ್ಳಿಯಲ್ಲಿರುವ ಬಂಧುಗಳ ಮನೆಯಲ್ಲಿ ನೆಲೆಸಿದ್ದೆ. ಸಮೀಪದಲ್ಲಿದ್ದ ಬಡ ಕುಟುಂಬದ ಮಧುರಹದಿನೇಳರ ಸುಂದರಿಯ ಪರಿಚಯ ಸಾಧಿಸಿಕೊಂಡೆ. ಸ್ವಾಭಾವಿಕವಾದ ಸೌಂದರ್ಯವಿರುವ ನಿಷ್ಕಳಂಕಳಾದ ಕುಮಾರಿ. ಪ್ರೇಮವನ್ನು 'ಹಾಬಿ'ಯಾಗಿಯೇ ಅಂಗೀಕರಿಸಿದ ನನಗೆ ಅವಳನ್ನು ವಶಪಡಿಸುವುದು ಸುಲಭದಲ್ಲಿ ಸಾಧ್ಯವಾಯಿತು. ನೂರಾರು ವಾಗ್ದಾನಗಳನ್ನು ಬೆಳ್ಳಿನಾಣ್ಯಗಳನ್ನು ಬಳಸಿ ನಾನವಳನ್ನು ನನ್ನ ತಾತ್ಕಾಲಿಕ ಪ್ರೇಮ ಭಾಜನಕ್ಕೊಳಪಡಿಸಿದೆ.

ಕಣ್ಣುಗಳಲ್ಲಿ, ತುಟಿಗಳಲ್ಲಿ, ಎದೆಯಲ್ಲಿ ಮಾದಕತೆಯಿರುವ ಆ ಹುಡುಗಿ ಸುಖಕರವಾದ ಹಲವು ರಾತ್ರಿಗಳನ್ನು ನನಗೆ ಸಂಮಾನಿಸಿದಳು. ಅವಳಿಂದ ಪಡೆಯಲು ಸಾಧ್ಯವಿರುವುದನ್ನೆಲ್ಲ ಅನುಭವಿಸಿ ನಾನು ಮರಳಿ ಬಂದೆ...

ಕಾದಂಬರಿಗಳಲ್ಲಿ ಸಿನಿಮಾಗಳಲ್ಲಿ ಈ ಬಗೆಯ ಕತೆಗಳನ್ನು ಕಾಣಬಹುದು...

ಒಂದು ವರ್ಷದ ಬಳಿಕವೇ ನಾನು ಆ ಊರಿಗೆ ಮತ್ತೆ ಹೋದುದು. ಆಗ ನಾನು ಅವಳ ಕುರಿತು ವಿಚಾರಿಸಿದೆ. ನಾಲ್ಕೈದು ತಿಂಗಳುಗಳಿಗೂ ಮೊದಲೇ ಅವಳು ಆತ್ಮಹತ್ಯೆ ಮಾಡಿಕೊಂಡಳಂತೆ!...